## ಟೈರ್‌ನ ಪಾಟ್

ಕೈತೋಟದಲ್ಲಿ ಮಣ್ಣಿನ ಪಾಟ್ ಬಳಸೋದು ಸಾಮಾನ್ಯ. ಹಾಗೇನೆ ಸಿಮೆಂಟ್ ಪೈಪ್ ತುಂಡುಗಳನ್ನೂ ನಿಲ್ಲಿಸಿ ಅದರಲ್ಲಿ ಗಿಡ ನೆಡುತ್ತಾರೆ. ನಮಗೆ ಗೊತ್ತಿರುವ ಹಳೆಯ ವಸ್ತುಗಳನ್ನೇ ಗಿಡ ಬೆಳೆಸಲು ಉಪಯೋಗಿಸಿ ಹೊಸತನ ತರುವವರಿದ್ದಾರೆ. ಬಳಸಿ ಬಿಟ್ಟ ರಬ್ಬರ್ ಟೈರ್‌ಗಳಲ್ಲಿ ಗಿಡ ಬೆಳೆಸಿದ್ದಾರೆ ಶೃಂಗೇರಿ ಸನಿಹದ ಕೆರೆಮನೆ ಹೋಂ ಸ್ಟೇನ ಭರತ್. ಕಾರ್‌ನ ಟೈರನ್ನು ಕಲಾತ್ಮಕವಾಗಿ ಕತ್ತರಿಸಿ ಸಿಮೆಂಟ್ ಪೈಪ್‌ನ ಮೇಲಿಟ್ಟು ಮಣ್ಣು ತುಂಬಿ ಗಿಡ ನೆಟ್ಟು ಕೈತೋಟದ ಆಕರ್ಷಣೆ ಹೆಚ್ಚಿಸಿದ್ದಾರೆ. ತುಂಬ ಬಾಳಿಕೆ ಬರುವ ಈ ಟೈರ್‌ನ ದೊಡ್ಡ ಪಾಟ್ ತಯಾರಿಸಲು ಸ್ವಲ್ಪ ಶ್ರಮ ಬೇಕು ಎಂದು ಭರತ್ ತಮ್ಮ ಅನುಭವ ಹೇಳುತ್ತಾರೆ.

ಚಿತ್ರ- ಬರಹ:
**ಗ. ಮ. ತುಂಬೇಮನೆ, ಶಿರಸಿ**





## ಗೂಡುದೀಪ

ದೀಪಾವಳಿ ಬಂತೆಂದರೆ ಎಲ್ಲೆಡೆ ಬಣ್ಣಬಣ್ಣದ ಗೂಡು ದೀಪಗಳ ಸಂಭ್ರಮವೋ ಸಂಭ್ರಮ. ಒಂದೊಂದು ಗೂಡು ದೀಪದ್ದು ಒಂದೊಂದು ಮಾದರಿ. ಚಿತ್ರದಲ್ಲಿರುವುದೂ ಒಂದು ಗೂಡು ದೀಪ ಅಂದರೆ ಅಚ್ಚರಿಯಾಗಬಹುದಲ್ಲವೇ? ರಥದ ಮಾದರಿಯ ಈ ಗೂಡು ದೀಪ ರಚಿಸಿದವರು ಸುಕೇಶ್ ಕಪ್ಪೆಟ್ಟು ಅವರು. ಥರ್ಮಾಕೋಲ್‌ನಿಂದ ರೂಪಿಸಿದ ಐದುಕಾಲು ಅಡಿ ಎತ್ತರದ ಈ ಗೂಡು ದೀಪ ಜನಮನ ಸೂರೆಗೊಳ್ಳುತ್ತಿದೆ.

**- ಪಿ.ಜಯವಂತ ಪೈ, ಕುಂದಾಪುರ**

## ಭಸ್ಮ ಕರಂಡ

ನೋಡಿದರೆ ಪುಟ್ಟ ಮಂದಿರದಂತೆ ಕಾಣಿಸುವ ಇದು ಮರದಿಂದ ನಿರ್ಮಿತವಾದ ಹಳೆಯ ಕಾಲದ ವಿಭೂತಿ ಕರಂಡ. ಹಣೆಗೆ ಧರಿಸುವ ಭಸ್ಮವನ್ನು ಸಂಗ್ರಹಿಸಿಡಲು ಬಳಕೆಯಾಗುತ್ತಿದ್ದ ಈ ಸುಂದರ ಕರಂಡ ಬಂಟ್ವಾಳ ತಾಲ್ಲೂಕಿನ ಕಡೆಂಗೋಡ್ಲಿನ ಶಿಕ್ಷಕ ಶಿವರಾಮಭಟ್ಟರ ಸಂಗ್ರಹದಲ್ಲಿದೆ. ಇದರ ಮೇಲ್ಭಾಗದಲ್ಲಿ ಮುಚ್ಚಳವಿದೆ. ಅದನ್ನು ತೆರೆದರೆ ಒಳಗೆ ಭಸ್ಮ ತುಂಬಲು ಜಾಗವಿದೆ.

**- ಪ.ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ**

